**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ (ಪೀಠಾಸೀನ, ಸಾಗರ)**

**ಎಸ್.ಸಿ. ಸಂಃ 10025/2023**

ಪಿಡಬ್ಲ್ಯೂ- 3

ಸಿಡಬ್ಲ್ಯೂ- 3

ಸಾಕ್ಷಿ ಹೆಸರು - ಹನುಮಂತ ಗೌಡ

ತಂದೆ ಹೆಸರು - ಬಸವಂತಪ್ಪ

ವಯಸ್ಸು - 42 ವರ್ಷ

ಉದ್ಯೋಗ - ವ್ಯವಸಾಯ

ವಾಸಃ - ಬೆಲವಂತನಕೊಪ್ಪ ಗ್ರಾಮ , ಸೊರಬ ತಾಲ್ಲೂಕು

**ಪ್ರಮಾಣ ವಚನ ಭೋದಿಸಿದ ದಿನಾಂಕಃ 10-03-2026.**

**<u>ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ</u>**

ಚಾಸಾ-2 ವಿವೇಕ್ ಪಾಟೀಲ್ ಗೊತ್ತಿಲ್ಲ. ಚಾಸಾ-1, ಚಾಸಾ2 ,ಚಾಸಾ-4 ರಿಂದ 6 ಗೊತ್ತಿಲ್ಲ. ಚಾಸಾ-1 ರವರು ಈ ಪ್ರಕರಣದಲ್ಲಿ ಸ್ಫೋಟಕ ವಸ್ತುಗಳನ್ನು ಬಳಸಿ ಕಲ್ಲು ಕ್ವಾರೆ ನಡೆಸಿದ ಬಗ್ಗೆ ಸ್ಥಳಕ್ಕೆ ಹೋಗಿ ಪಂಚನಾಮೆ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಮು ಮಾ - 1 ರಿಂದ 21 ನ್ನು ಪೋಲೀಸರು ನನ್ನ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಆರೋಪಿತರು ಗೊತ್ತಿಲ್ಲ. ಈಗ ತೋರಿಸಿದ ನಿಪಿ -1 ರಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಯ

ಸಹಿಯನ್ನು ನಿಪಿ 1(ಜಿ) ಎಂದು ಗುರುತಿಸಲಾಯಿತು. ಸುಮಾರು 8-9 ವರ್ಷದ ಹಿಂದೆ ನಾನು ನನ್ನ ಜಮೀನಿಗೆ ಹೋಗಬೇಕಾದರೆ ಪೋಲೀಸರು ನನ್ನನ್ನು ಕರೆದು ಸದರಿ ದಾಖಲೆಗೆ ಸಹಿ ಹಾಕು ಎಂದು ಹೇಳಿದರು . ಆದ್ದರಿಂದ ನಾನು ಸಹಿ ಹಾಕಿರುತ್ತೇನೆ. ಪೋಲೀಸರು ಯಾವ ವಿಚಾರಕ್ಕೆ ನನ್ನ ಸಹಿಯನ್ನು ತೆಗೆದುಕೊಂಡರು ಎಂದು ನನಗೆ ಗೊತ್ತಿಲ್ಲ. ಆರೋಪಿತರು ಗೊತ್ತಿಲ್ಲ.

**(ಮಾನ್ಯ ಸ.ಅ.ರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿದ್ದು, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)**

**<u>ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ</u>**

ದಿನಾಂಕಃ 25-03-2015 ರಂದು ಚಾಸಾ1 ರವರು ನನ್ನನ್ನು ಮತ್ತು ಚಾಸಾ2 ರವರನ್ನು ಮತ್ತು ಗ್ರಾಮ ಲೆಕ್ಕಾಧಿಕಾರಿಗಳಾದ ಚಾಸಾ 4 ರಿಂದ 6 ರವರನ್ನು ಬೆಲವಂತನಕೊಪ್ಪ ಗ್ರಾಮದ ಸ.ನಂಃ 100 ರಲ್ಲಿ 1 ನೇ ಆರೋಪಿ ನಡೆಸಿದ್ದ ಕಲ್ಲು ಕ್ವಾರೆಗೆ ಕರೆದುಕೊಂಡು ಹೋಗಿದ್ದರು, ಸದರಿ ಸ್ಥಳವನ್ನು ಪರಿಶೀಲನೆ ಮಾಡಿದಾಗ ಸದರಿ ಸ್ಥಳದಲ್ಲಿ 1 ನೇ ಆರೋಪಿ ಸ್ಫೋಟಕ ವಸ್ತುಗಳನ್ನು ಬಳಸಿ ಕಲ್ಲು ಬಂಡೆಗಳನ್ನು ಸ್ಫೋಟಿಸಿರುವುದು

ಕಂಡುಬಂತು. ನಂತರ ಅದೇ ರೀತಿ 2 ರಿಂದ 6 ನೇ ಆರೋಪಿತರು ನಡೆಸುತ್ತಿದ್ದ ಕಲ್ಲು ಕ್ವಾರೆಗೆ ಹೋಗಿ ದಾಳಿ ಮಾಡಿ ಮತ್ತು ಆರೋಪಿತರು ನಡೆಸುತ್ತಿದ್ದ ಕಲ್ಲು ಕ್ವಾರಿಗಳಿಂದ ನ್ಯಾಯಾಲಯದ ಮುಂದೆ ಇರುವ ಮು ಮಾ 1 ರಿಂದ ಮು ಮಾ 21 ವಸ್ತುಗಳನ್ನು ನನ್ನ ಹಾಗೂ ಚಾಸಾ2 ರವರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಚಾಸಾ1 ರವರು ನಿಪಿ –1 ರಂತೆ ಬೆಳಿಗ್ಗೆ 11 ರಿಂದ ಮಧ್ಯಾಹ್ನ 3 ಗಂಟೆ ವರೆಗೆ ಪಂಚನಾಮೆ ಜರುಗಿಸಿ ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ನಿಪಿ –1 ಮಹಜರ್ ದಾಖಲೆಯನ್ನು ಓದಿ ತಿಳಿದುಕೊಂಡು ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 1 ರಲ್ಲಿರುವ ವಿಚಾರಗಳು ನನಗೆ ಸಂಪೂರ್ಣವಾಗಿ ಗೊತ್ತಿದ್ದರೂ ಸಹ, ಚಾಸಾ1 ರವರು ಆರೋಪಿತರ ಕಲ್ಲು ಕ್ವಾರೆಯಲ್ಲಿ ದಾಳಿ ಮಾಡಲು ಹೋದಾಗ ನಾನು ಸ್ಥಳದಲ್ಲಿ ಇದ್ದರೂ ಸಹ ಈಗ ಆರೋಪಿತರೊಂದಿಗೆ ಶಾಮೀಲಾಗಿ ಅವರಿಗೆ ಅನುಕೂಲ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಈ ಎನ್ ವಕೀಲರಿಂದಃ**

ಆರೋಪಿತರ ಪರ ವಕೀಲರು ಸಾಕ್ಷಿಯ ಪಾಟೀಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).